


ಸಿಡ್ನಿ ಒಲಿಂಪಿಕ್ಸ್‌ನ (2000) ವರ್ಣರಂಜಿತ ಸಮಾರೋಪ ಸಮಾರಂಭ

ವಿಶ್ವದ ಉತ್ಕೃಷ್ಟ ಕ್ರೀಡಾಕೂಟಗಳಲ್ಲಿ ಅಗ್ರಸ್ಥಾನದಲ್ಲಿರುವ ಒಲಿಂಪಿಕ್ಸ್ ಆರಂಭಕ್ಕೆ ದಿನಗಣನೆ ಶುರುವಾಗುತ್ತಿದ್ದಂತೆ ಈಗಲೂ ಕಣ್ಣ ಮುಂದೆ ಕಟ್ಟಿದಂತಿರುವ ಅದೊಂದು ಚಿತ್ರ ಮತ್ತು ಅದೊಂದು ಮಾತು ಸಾವಿರಾರು ಕಥನಗಳನ್ನು ಹೇಳುತ್ತಿವೆ. ಬದುಕಿಗೆ ಹುಮ್ಮಸ್ಸು ತುಂಬುತ್ತಿವೆ.

ಅದು 2021ರ ಆಗಸ್ಟ್ 8. ಟೋಕಿಯೊ ಒಲಿಂಪಿಕ್ಸ್ ಸಮಾರೋಪ ಸಮಾರಂಭದ ದಿನ. ಆಗಿನ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದ 206 ದೇಶಗಳ 10 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ವೃತ್ತಾಕಾರದಲ್ಲಿ ನಿಂತು ತಮ್ಮ ದೇಶಗಳ ಧ್ವಜಗಳನ್ನು ಪ್ರದರ್ಶಿಸಿ ತೋರಿದ ಒಗ್ಗಟ್ಟಿನ ಸುಂದರ ಚಿತ್ರ ಸ್ಮೃತಿಪಟಲದಲ್ಲಿ ಅಜರಾಮರ. ಕೋವಿಡ್‌ನ ದುರಿತ ಕಾಲದಲ್ಲಿ, ಮನುಷ್ಯ ಸಂಕುಲ ಸಂಕಟಕ್ಕೆ ಬಿದ್ದ ಸಮಯದಲ್ಲಿ ನಡೆದಿದ್ದ ಒಲಿಂಪಿಕ್ಸ್ ಅದಾಗಿತ್ತು. ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಅಧ್ಯಕ್ಷ ಥಾಮಸ್ ಬಾಕ್ ಆಗ ಹೇಳಿದ್ದ 'ಈ ಒಲಿಂಪಿಕ್ಸ್ ಜಗತ್ತಿಗೆ ಹೊಸ ಭರವಸೆ ನೀಡಿದೆ' ಎನ್ನುವ ಮಾತು ಪ್ರತಿಯೊಬ್ಬರಲ್ಲಿಯೂ ಬದುಕಿಗೆ ಆಶಾಕಿರಣದಂತೆ ಗೋಚರಿಸಿತ್ತು.

ಕ್ರೀಡೆಯ ಮುಖ್ಯ ಆಶಯವೇ 'ನಾವೆಲ್ಲ ಒಂದು' ಎನ್ನುವ ಸಂದೇಶ ಸಾರುವುದು. ದೇಶ, ಭಾಷೆ, ಗಡಿ, ಧರ್ಮ, ಅಂತರ್ಯುದ್ಧ, ವೈಮನಸ್ಸು, ವೈರುಧ್ಯಗಳನ್ನು ಮೀರಿ ಬದುಕಿನ ಸಾಫಲ್ಯತೆ ಕಡೆಗೆ ಹೋಗುವುದು. ಇನ್ನಷ್ಟು ಸುಲಭವಾಗಿ ಹೇಳುವುದಾದರೆ, 'ಮನುಷ್ಯ ಜಾತಿ ತಾನೊಂದೆ ವಲಂ' ಎನ್ನುವುದರ ಪ್ರತಿರೂಪವೇ ಒಲಿಂಪಿಕ್ಸ್. ಏಕತೆ ಪಸರಿಸುವುದು ಇದರ ಉದ್ದೇಶಗಳಲ್ಲೊಂದು.

ಒಲಿಂಪಿಕ್ಸ್‌ನ ಚಿಹ್ನೆಯ ಬಣ್ಣಗಳ ಸಂದೇಶವೂ ಇದೇ ಆಗಿದೆ. ಒಂದರೊಳಗೊಂದು ಸೇರಿರುವ ಐದು ವರ್ತುಲಗಳು ಆಧುನಿಕ ಒಲಿಂಪಿಕ್ಸ್‌ನ ಚಿಹ್ನೆಯಾಗಿದ್ದು–ನೀಲಿ, ಹಳದಿ, ಕಪ್ಪು, ಹಸಿರು ಮತ್ತು ಕೆಂಪು ಬಣ್ಣ ಒಳಗೊಂಡಿವೆ. ಇವುಗಳಲ್ಲಿ ಕನಿಷ್ಠ ಒಂದು ಬಣ್ಣ ಜಗತ್ತಿನ ಎಲ್ಲ ದೇಶಗಳ ಧ್ವಜಗಳ ಬಣ್ಣಗಳಲ್ಲಿ ಇರುತ್ತದೆ. ಆದ್ದರಿಂದ ಈ ಚಿಹ್ನೆ ಎಲ್ಲ ದೇಶಗಳ ಏಕತೆಯನ್ನು

